INDIAN JOURNAL OF HISTORY AND ARCHAEOLOGY
ISSN (e):2582-225Xwww.ijha.in
Vol-7, Issue -3, May--June, 2025
PageNo,69-74
Peer -Reviewed, Refereed Journal

# ಹನೂರು ತಾಲೂಕಿನ ಶಾಸನಗಳು – ಒಂದು ಅವಲೋಕನ

* ಪವನ್‌ಕುಮಾರ್ ಎಸ್.[1]
**ಪ್ರೊ.ಎಂ.ಜಿ. ಮಂಜುನಾಥ.[2]

ಚಾಮರಾಜನಗರ ಜಿಲ್ಲೆಯ 5 ತಾಲ್ಲೂಕುಗಳಲ್ಲಿ ಹನೂರು ತಾಲೂಕು ಒಂದು. ಇದು ಕೊಳ್ಳೆಗಾಲ ತಾಲೂಕಿನಿಂದ ಬೇರ್ಪಟ್ಟ ಹೊಸ ತಾಲೂಕಾಗಿದೆ. ಜಾನಪದ ಕಲೆಗಳ ತವರೂರು ಎಂದು ಹೆಸರುವಾಸಿ ಆದ ಈ ತಾಲೂಕು ಚಾಮರಾಜನಗರ ಜಿಲ್ಲೆಯಿಂದ 66 ಕಿ.ಮೀ. ಅಂತರದಲ್ಲಿದೆ. ಲೊಕ್ಕನಹಳ್ಳಿ, ರಾಮಾಪುರ ವ್ಯಾಪ್ತಿಯಲ್ಲಿ ಬರುವ 50 ಗ್ರಾಮಗಳಿಂದ ಕೂಡಿದ್ದು, 817 ಚ.ಕಿ.ಮೀ. ವಿಸ್ತೀರ್ಣವನ್ನು ಒಳಗೊಂಡಿದೆ. ಮಲೆಮಹದೇಶ್ವರ ಬೆಟ್ಟ, ಚಿಕ್ಕಲ್ಲೂರು ಹಾಗೂ ಹೊಗೆನಕಲ್ಲು ಜಲಪಾತ ಪ್ರಮುಖ ಪ್ರೇಕ್ಷಣೀಯ ಸ್ಥಳವಾಗಿದ್ದು, ಹನೂರಿನ ಶ್ರೀ ಬೆಟ್ಟಳ್ಳಿ ಮಾರಮ್ಮ, ಆಂಜನೇಯಸ್ವಾಮಿ ದೇವಸ್ಥಾನ, ಕನ್ಯಾಪರಮೇಶ್ವರ ದೇವಸ್ಥಾನ, ಚಾಮುಂಡೇಶ್ವರಿ ದೇವಸ್ಥಾನ, ಚೆಲುವನಾರಾಯಣಸ್ವಾಮಿ ದೇವಸ್ಥಾನ, ದೊಡ್ಡಮ್ಮ ತಾಯಿ, ಸಿದ್ದಪ್ಪಾಜಿ, ಶನೈಶ್ವರ ದೇವಸ್ಥಾನ ಹೆಸರುವಾಸಿ ಆಗಿದೆ. ಮಾರಮ್ಮನ ದೇವಸ್ಥಾನದಲ್ಲಿ ವರ್ಷಕ್ಕೊಮ್ಮೆ ನಡೆಯುವ ಜಾತ್ರೆ ಬಹಳ ಹೆಸರುವಾಸಿ ಆಗಿದೆ. ಈ ಜಾತ್ರೆ ಐದು ದಿನ ನಡೆಯಲಿದ್ದು ಬಾಯಿಬೀಗ ಪ್ರಮುಖ ಆಕರ್ಷಣೆ ಆಗಿದೆ.

ಹನೂರು ತಾಲೂಕಿನಲ್ಲಿ 18 ಶಾಸನಗಳು ಇದುವರೆಗೆ ಲಭ್ಯವಿದ್ದು, ಅಂದಿನ ಸಮಾಜದ ಸಾಮಾಜಿಕ, ರಾಜಕೀಯ, ಧಾರ್ಮಿಕ ವ್ಯವಸ್ಥೆಯ ಸಮಕಾಲೀನ ವಿಷಯಗಳ ದಾಖಲಿಸಿ ಸ್ಮರಣೀಯವಾಗಿಸುವ ಪ್ರಯತ್ನದ ಫಲವಾಗಿ ಶಾಸನಗಳು ತಮಗರಿವಿಲ್ಲದೇ ಅಂದಿನ ಇತಿಹಾಸ ಮತ್ತು ಸಂಸ್ಕೃತಿಯ ಚಿತ್ರಣಗಳನ್ನು ಕಟ್ಟಿಕೊಟ್ಟಿದೆ. ಈ ಪ್ರದೇಶಗಳಲ್ಲಿ ಪ್ರಮುಖ ರಾಜವಂಶಗಳ ಶಾಸನಗಳು ದೊರೆತಿದ್ದು, ಚೋಳರ 3 ಶಾಸನ, ಹೊಯ್ಸಳರ 3 ಶಾಸನ, ವಿಜಯನಗರ ಅರಸರ 3 ಶಾಸನ, ಮೈಸೂರು ಒಡೆಯರ ಆಳ್ವಿಕೆಯ ಕಾಲದ 01 ಶಾಸನ, ನಲ್ಲೂರುಗೌಡರ 01 ಶಾಸನ, ಸಂಗಯ್ಯಮಾದಶೆಟ್ಟಿಯ 1 ಶಾಸನ, ಶಿಗೆಕೆರೆಯ ನಾಯಕರ 1 ಶಾಸನ ದೊರೆತಿದೆ.

---

[1].ಸಂಶೋಧನಾ ವಿದ್ಯಾರ್ಥಿ, ಕನ್ನಡ ವಿಭಾಗ,ಸ್ನಾತಕೋತ್ತರ ಕೇಂದ್ರ, ಹಾಸನ,ಮೈಸೂರು ವಿಶ್ವವಿದ್ಯಾನಿಲಯ.
[2].ಪ್ರಾಧ್ಯಾಪಕರು, ಸ್ನಾತಕೋತ್ತರ ಕೇಂದ್ರ, ಹಾಸನ, ಮೈಸೂರು ವಿಶ್ವವಿದ್ಯಾನಿಲಯ.

ಹನೂರಿನ ತಾಲೂಕಿನ ಬಂಡಳ್ಳಿಯಲ್ಲಿ ದೊರೆತಿರುವ ಶಾಸನವು ಈ ತಾಲೂಕಿನಲ್ಲಿ ದೊರೆತ ಪ್ರಾಚೀನ ಶಾಸನವೆಂದು ಪರಿಗಣಿಸಲಾಗಿದೆ. ಈ ಶಾಸನವು ತ್ರುಟಿತವಾಗಿದ್ದು,[1] ಕ್ರಿ.ಶ. 10ನೇ ಶತಮಾನದ್ದೆಂದು ಗುರುತಿಸಲಾಗಿದೆ. ಇದು ಕೇತ್ತನ್ ಮೆಶಣನ್ ಎಂಬ ಪಾಳೆಗಾರನು ತನ್ನ ಮಗನಾದ ತಿಸೈಮಾನಿಕಚೆಟ್ಟಿ ಎಂಬ ವೀರನು ಹುಲಿಯ ಬೇಟೆಗೆ ಹೋಗಿ ಹುಲಿಯನ್ನು ಕೊಂದು ತಾನು ಸತ್ತ ಸ್ಮರಣಾರ್ಥವಾಗಿ ವೀರನ ನೆನಪಾರ್ಥವಾದ ವೀರಗಲ್ಲನ್ನು ನಿಲ್ಲಿಸಿದ್ದಾನೆ. 10ನೇ ಶತಮಾನದಲ್ಲಿ ಹನೂರು ಪ್ರಾಂತ್ಯವು ಪಾಳೆಗಾರ ಆಳ್ವಿಕೆಯನ್ನು ತಿಳಿಸುತ್ತಾ ಇವರಿಗೆ ಬೇಟೆ ಆಡುವ ಪ್ರವೃತ್ತಿ ಇತ್ತೆಂಬುದು ಈ ಶಾಸನದಿಂದ ತಿಳಿಯಬಹುದಾಗಿದೆ.

ದಕ್ಷಿಣ ಭಾರತದ ಪ್ರಮುಖ ರಾಜವಂಶವಾಗಿದ್ದ, ತಮಿಳುನಾಡಿನ ಪ್ರಬಲರಾಜವಂಶವಾಗಿದ್ದ ಚೋಳರು ಕ್ರಿ.ಶ.10 ರಿಂದ 12ನೇ ಶತಮಾನದವರೆವಿಗೂ ಕರ್ನಾಟಕದ ದಕ್ಷಿಣ ಪ್ರಾಂತ್ಯಗಳಾದ ಮೈಸೂರು, ಚಾಮರಾಜನಗರ, ಕೊಳ್ಳೆಗಾಲ, ಮುಡಿಗೊಂಡ, ಹನೂರು ಇಲ್ಲಿಯವರೆವಿಗೂ ತಮ್ಮ ಸಾಮ್ರಾಜ್ಯವನ್ನು ವಿಸ್ತರಿಸಿದ್ದು, ಹನೂರು ತಾಲೂಕಿನ ಶ್ಯಾಗಂ, ಭದ್ರಳ್ಳಿ, ಬೆಳತೂರು ಗ್ರಾಮದಲ್ಲಿ ದೊರೆತ ಶಾಸನಗಳು ಇವರ ಸಾಮ್ರಾಜ್ಯವನ್ನು ವಿಸ್ತರಿಸಿದ್ದ ಕುರುಹುಗಳಾಗಿವೆ.[2] ಕ್ರಿ.ಶ. 11ನೇ ಶತಮಾನದ ಶ್ಯಾಗಂ ಗ್ರಾಮದಲ್ಲಿ ದೊರೆತ ಶಾಸನವು ಚೋಳ ದೊರೆ ಒಂದನೇ ರಾಜಾಧಿರಾಜನ ಪ್ರಶಸ್ತಿಗಳನ್ನು ಉಲ್ಲೇಖಿಸುತ್ತಾ, 28ನೇ ಸಂವತ್ಸರದಲ್ಲಿ ರಾಜ್ಯವಾಳುತ್ತಿದ್ದ ಮುಡಿಗೊಂಡ ಶೋಳ ಮಂಡಲದ ಗಂಗೈಕೊಂಡ ಶೋಳ ವಳನಾಡಿನ ಕುಂದನಾಡು ಮತ್ತು ತೊಂಡನೂರ್ ನಾಡಿನ ರಾಜೇಂದ್ರ ಶೋಳೆಗಾವುಂಡನ ಆಜ್ಞೆಯ ಮೇರೆಗೆ ಕರೈಕೈಂಡೈಯನ್ ಎಂಬುವವನು ಮಹದೇವ ದೇವರಿಗೆ ಭೂಮಿಯನ್ನು ದಾನ ಮಾಡಿರುವ ವಿಚಾರದ ಜೊತೆಗೆ, ಜನರು ಬೆಳೆಯುವ ಭೂಮಿಯಲ್ಲಿ ಎರಡು ಖಂಡುಗ ಹಾಗೂ ಒಂದು ಕೊಳಗ ಬೀಜವನ್ನು ದಾನ ಮಾಡಿರುವ ವಿಷಯವನ್ನು ಸಹ ದಾಖಲಿಸಿದೆ. ಈ ಶಾಸನದಲ್ಲಿ ಉಕ್ತವಾಗಿರುವ ಒಂದನೇ ರಾಜೇಂದ್ರ ಚೋಳನ ಆಳ್ವಿಕೆಯನ್ನು ತಿಳಿಸಲಾಗಿದೆ.

ಇದೇ ತಾಲೂಕಿನ ಭದ್ರಳ್ಳಿ ದೊರೆತ ಶಾಸನವು[3] ಕ್ರಿ.ಶ. 1112–13ರ ಕಾಲಘಟ್ಟದಲ್ಲಿ ಚೋಳರ ಅರಸ ಒಂದನೇ ಕುಲೋತ್ತುಂಗ ಚೋಳನ ಆಳ್ವಿಕೆಯನ್ನ ತಿಳಿಸುತ್ತಾ, ಈತನನ್ನು ರಾಜಕೇಸರಿ ಎಂಬುದಾಗಿ ಕರೆಯುವ ಬದಲು ಪರಕೇಸರಿ ಎಂದು ಸಂಬೋಧಿಸಿದ್ದು, ಮುಡಿಗೊಂಡ ಶೋಳಮಂಡಲದ ವೀರರಾಜೇಂದ್ರವಳನಾಡಿನಲ್ಲಿ ಆಳ್ವಿಕೆ ಮಾಡುತ್ತಿದ್ದು 36ನೇ ವರ್ಷದಲ್ಲಿ ವಿಜಯದೇವತೆಯು ಉಗ್ರವಾದ ಕಾರಣ ಶಾಂತಿಗಾಗಿ ವಿಜಯದೇವತೆಯನ್ನು ಪ್ರತಿಷ್ಠಾಪಿಸಿ ಅವಳಿಗೆ ಚಿನ್ನದ ಕಿರೀಟವನ್ನು ತೊಡಿಸಿದ ಕಾರಣ ಭೂದೇವತೆಯ ಮುಂದೆ ಐಶ್ವರ್ಯ ದೇವತೆಯು ಪ್ರಕಾಶಮಾನವಾದಳು ಎಂಬ ಹೊಗಳಿಕೆಯ ಮಾತುಗಳನ್ನು ಈ ಶಾಸನದಲ್ಲಿ ಉಲ್ಲೇಖಿಸಲಾಗಿದೆ. ಇದೇ ರಾಜವಂಶಕ್ಕೆ ಸೇರಿದ [4]ಕ್ರಿ.ಶ. 12ನೇ ಶತಮಾನದ ಬೆಳತೂರಿನ ಶಿಲಾ ಶಾಸನವು ಶಿಥಿಲಗೊಂಡಿದ್ದು ತಮಿಳು ಭಾಷೆ, ಕನ್ನಡ ಲಿಪಿಯಲ್ಲಿರುವ

ಈ ಶಾಸನವು ಕಾಲದ ಉಲ್ಲೇಖದೊಂದಿಗೆ ಪ್ರಾರಂಭಗೊಂಡು ಮುಡಿಗೊಂಡ ಶೋಳಮಂಡಲದ ಗಂಗೈಕೊಂಡ ಚೋಳ ವಳನಾಡಿನಲ್ಲಿ ವಿಳತ್ತೂರ್ (ಬೆಳತೂರು) ಭೂಮಿ ಇದ್ದಿತ್ತು ಎಂಬ ವಿವರವನ್ನು ದಾಖಲಿಸಲಾಗಿದೆ.

ಕರ್ನಾಟಕದ ದಕ್ಷಿಣ ಭಾಗದಲ್ಲಿ ಹೊಯ್ಸಳರು ಸುಮಾರು 4 ಶತಮಾನಗಳವರೆಗೆ ಆಳ್ವಿಕೆ ನಡೆಸಿದ್ದು, ಕರ್ನಾಟಕದ, ಆಡಳಿತ ಮತ್ತು ಶಿಲ್ಪಕಲೆಗೆ ನೀಡಿದ ಕೊಡುಗೆ ಅವಿಸ್ಮರಣೀಯ. ಇದೇ ತಾಲೂಕಿನ ಬೆಳತೂರು ಗ್ರಾಮದ ಮಹಾಲಿಂಗೇಶ್ವರ ದೇವಾಲಯ ಹತ್ತಿರ ದೊರೆತಿರುವ [5]ಕ್ರಿ.ಶ. 12ನೇ ಶತಮಾನದ ಶಾಸನವು ಮೊದಲೆರೆಡು ಸಾಲುಗಳು ತ್ರುಟಿತಗೊಂಡಿದ್ದು ಹೊಯ್ಸಳರು ಅರಸ ನರಸಿಂಹನ ಬಿರುದುಗಳನ್ನು ಉಲ್ಲೇಖಿಸುತ್ತಾ, ತ್ರಿಭುವನಮಲ್ಲ, ಭುಜಬಲ ವೀರಗಂಗಾ, ಹೊಯ್ಸಳ ಜಗದೇಕಮಲ್ಲನು, ತಲಕಾಡು, ಕೊಂಗು, ನಂಗಲಿ, ಉಚ್ಚಂಗಿ, ವನವಾಸಿಗಳನ್ನು ಗೆದ್ದುಕೊಂಡನು ಎಂಬ ವಿವರಗಳನ್ನು ಒಳಗೊಂಡಿದೆ. ಹೊಯ್ಸಳರ ಕಾಲದ ಕ್ರಿ.ಶ.[6] 14ನೇ ಶತಮಾನದ ಕೌದಳ್ಳಿಯಲ್ಲಿ ದೊರೆತ ಶಾಸನವು ಸಾಮಾನ್ಯ ಮಂಗಲ ಪದ್ಯದೊಂದಿಗೆ ಪ್ರಾರಂಭಗೊಂಡು ಹೊಯ್ಸಳರ ಅರಸ ಮೂರನೇ ಬಲ್ಲಾಳನ ಆಡಳಿತವನ್ನು ತಿಳಿಸುತ್ತದೆ. ಈತನ ಅಧಿಕಾರಿಯಾದ ಮಾದಪ್ಪ ದಂಣ್ಣನಾಯಕನು ಕುರಹಟ್ಟಿನಾಡು ಮಂಡಳೀಕರಾದ ಯುದಿಕ ಅಪ್ಪಣ್ಣ ಮತ್ತು ಕದಿಯಾರಸರಿಗೆ ಗದ್ದೆ ಮತ್ತು ಹೊಲವನ್ನು ಸರ್ವಮಾನ್ಯವಾಗಿ ದಾನ ನೀಡಿದ್ದಾನೆ. ಇದರ ಎಲ್ಲೆ ಕೆಳಗಡೆ ಬಾವಿಯಿಂದ ಮೇಲುಗಡೆ ಮರದಹೊರವಿಗೂ ಇದೆ ಎಂಬ ವಿವರವನ್ನು ಒಳಗೊಂಡಿದೆ.[7]

ಕ್ರಿ.ಶ.1522ರ ಹನೂರು ಗ್ರಾಮದಲ್ಲಿ ದೊರೆತ ಶಾಸನವು ಸಾಮಾನ್ಯ ಮಂಗಲಪದದೊಂದಿಗೆ ಪ್ರಾರಂಭವಾಗಿದೆ. ತರುವಾಯ ವಿಜಯನಗರದ ಅರಸ ಶ್ರೀಕೃಷ್ಣದೇವರಾಯರ ಆಳ್ವಿಕೆಯನ್ನು ಪರಿಚಯಿಸುತ್ತಾ, ಗೌಂಡಣ್ಯಗೋತ್ರ ಆಪಸ್ತಂಭಸೂತ್ರ ಯಜುಶಾಕ್ಯಾಧ್ಯಾರದ ರಾಜರಾಜನ ಮಗನಾದ ಸಾಳ್ವಗೋವಿಂದರಾಜನು, ತನ್ನ ನಾಯಕತನವನ್ನು ಪಾಲಿಸುತ್ತ, ಉಮ್ಮತ್ತೂರು ರಾಜ್ಯದ ಹೊಸವಾಡ ಸ್ಥಳದ ಕಲಿಯುಗವಾಡಿ ಗ್ರಾಮವನ್ನು ದಕ್ಷಿಣ ಪ್ರಯಾಗ, ದಕ್ಷಿಣ ವಾರಣಾಸಿ, ಶ್ರೀ ಕಾವೇರಿ ಕಪಿಲಾಸಂಗಮ ಪಂಚಶ್ಲೋಕಕ್ಷತ್ಮುಲ ಮಧ್ಯ ಭೂಕೈಲಾಸ ಎಂದು ಹೆಸರುವಾಸಿಯಾಗಿದ್ದ ಅಗಸ್ತ್ಯನಾಥ ದೇವರಿಗೆ ಕಲಿಯುಗವಾಡಿ ಗ್ರಾಮವನ್ನು ದಾನ ಮಾಡಿರುವ ವಿವರವಿದ್ದು ಈ ದಾನವನ್ನು ಆಲರೆಕಟ್ಟುವ ತಿರುಪಣಿ ಕೆಲಸದ ಆಮ್ರುತ ಪಡಿಗೆಯ ಕೆಲಸಕ್ಕಾಗಿ ಶಿವರಾತ್ರಿಯ ಪುಣ್ಯಕಾಲದಲ್ಲಿ ತುಂಗಭದ್ರ ತೀರದಲ್ಲಿರುವ ವಿರೂಪಾಕ್ಷಲಿಂಗನ ಸನ್ನಿಧಿಯಲ್ಲಿ ದಾನವನ್ನು ನೀಡಲಾಗಿದೆ. ಶಾಸನದ ಕೊನೆಯಲ್ಲಿ ಅಷ್ಟಭೋಗವನ್ನು ಅನುಭವಿಸಿ ಎಂದು ಇದಕ್ಕೆ ರಾಜ ರಾಜನ ಮಗ ಸಾಳುವ ಗೋವಿಂದನ ಒಪ್ಪಿಗೆ ನೀಡಿದೆ ಎಂಬ ಅಂಶವನ್ನು ಕಾಣಬಹುದು.

ಬಂಡಳ್ಳಿ ಗ್ರಾಮದ[8] ಕ್ರಿ.ಶ.1434ರ ಶಾಸನವು ಕಾಲದ ಉಲ್ಲೇಖದೊಂದಿಗೆ ಪ್ರಾರಂಭಗೊಂಡು ಬಂಡಳ್ಳಿಯ ಮಹಾಪ್ರಭು ಕಾಳಿಮಯ್ಯನು ಶಿಗೆಕೆರೆಯ ನಾಯಕರಿಗೆ ನೀಡಿದ ಕೊಡುಗೆ ಎಂಬ ವಿವರವಿದೆ. ಇದೇ ಗ್ರಾಮದಲ್ಲಿ ದೊರೆತ[9] ಕ್ರಿ.ಶ.1845–46 ಶಾಸನವು ಶಿವಸ್ತುತಿಯೊಂದಿಗೆ ಆರಂಭಗೊಂಡು ಚೋಳರ ಕಾಲದಲ್ಲಿ ನಿರ್ಮಾಣವಾಗಿದ್ದ ಉಮಾಮಹೇಶ್ವರ ದೇವಾಲಯ ಹಾಗೂ ವೀರಭದ್ರ ದೇವಾಲಯಗಳ ಮಜ್ಜನಕ್ಕೆಂದು ನಿರ್ಮಾಣವಾಗಿದ್ದ ಬಾವಿಯು ಶಿಥಿಲವಾಗಿದ್ದವು. ಇವುಗಳನ್ನು ಸಂಗಯ್ಯನ ಮಾದಶೆಟ್ಟಿಯ ಮಗ ಸಿಂಗೆಶೆಟ್ಟಿಯು ಮತ್ತೇ ಈ ಬಾವಿಗಳನ್ನು ಜೀರ್ಣೋದ್ಧಾರ ಮಾಡಿದ ಎಂಬ ವಿವರವಿದೆ.

ಅಜ್ಜೀಪುರ ಗ್ರಾಮದ[10] ಕ್ರಿ.ಶ.12ನೇ ಶತಮಾನದ ಶಾಸನವು ಶಿಥಿಲವಾಗಿದೆ. ದೇವನೂರಿನ ಆದಿಗಾವುಂಡನ ಮಗನಾದ (ಹೆಸರು ಸ್ಪಷ್ಟವಿಲ್ಲ) ಇಲಮೇಶ್ವವರ ಒಡ್ಯೆಯ ದೇವರಿಗೆ ಭತ್ತವನ್ನು ಕೊಂಡುಕೊಂಡು ದಾನ ಮಾಡಿದ್ದಾನೆ. ಇದನ್ನು ಬರೆದವನು ತಿಮ್ಮಯ್ಯನು ಎಂಬ ವಿವರವಿದೆ.

ಮಾರ್ಟಳ್ಳಿ ಗ್ರಾಮದ[11] ಕ್ರಿ.ಶ. 1845–46ರ ಈ ಶಾಸನವು ವೀರ ಚಿಕ್ಕಣ್ಣಗೌಡನ ಮಗ ಸಿದ್ದಣ್ಣಗೌಡನು ತರ್ಮಾಳ್ವವಿರಾಮಂಗೆ ಪುಣ್ಣವಾಗಲೆಂದು ಅಕ್ಕಸಾಲಿ ಮಾದಣ್ಣ ಹೇಳಿರುವನೆಂದು ಕೊನೆಯಲ್ಲಿ ಶ್ರೀ ಎಂಬ ಪದವನ್ನು ಕಾಣಬಹುದು.

ಲೊಕ್ಕನಹಳ್ಳಿ ಗ್ರಾಮದ[12] ಕ್ರಿ.ಶ.9–10ನೇ ಶತಮಾನದ ಈ ಶಾಸನವು ನಿಷಿಧಿ ಶಾಸನವಾಗಿದೆ. ಜೋಗೆವಳ್ಳ ಬಸವಯ್ಯನು ಜೈನಧರ್ಮ ಆಚಾರ ವಿಚಾರದಂತೆ ಸನ್ಯಾಸನಂಗೈದು (ಸಲ್ಲೇಖನ ವ್ರತವನ್ನು ಆಚರಿಸಿ) ಸಾವನ್ನಪ್ಪಿದ್ದಾನೆ. ಹಾಗಾಗಿ ಈತನ ಸ್ಮರಣಾರ್ಥವಾಗಿ ಬಸವಯ್ಯನ ಮಗನಾದ ದೊರೆಯಮ್ಮನು ನಿಷಿಧಿಕಲ್ಲನ್ನು ನಿಲ್ಲಿಸಿದ್ದಾನೆ ಎಂಬ ವಿವರವನ್ನು ದಾಖಲಿಸಲಾಗಿದೆ.

ಹನೂರು ಗ್ರಾಮದ[13] ಕ್ರಿ.ಶ.ಸು.16ನೇ ಶತಮಾನದ ಶಾಸನವು ಶಾಪಾಶಯದ ಪದ್ಯಭಾಗದೊಂದಿಗೆ ಆರಂಭಗೊಂಡಿದೆ. ಕೆಲವು ಸಾಲಿನ ಕೊನೆಯಲ್ಲಿ ಗೌಡವೀರಯ್ಯ ಜನಹಪ್ಪಗೌಡ ಎಂಬ ವಿವರದೊಂದಿಗೆ, ಕೆಲವು ಗೌಡರುಗಳು ವಿಜಯನಗರಕ್ಕೆ ಹೋಗಿ ಅಲ್ಲಿನ ಅರಸ ಕೃಷ್ಣದೇವರಾಯರನ್ನು, ಸಾಳುವ ತಿಮ್ಮರಸ ಹಾಗೂ ಗೋವಿಂದರಾಜಯ್ಯನನ್ನು ಮತ್ತಿತರರನ್ನು ಭೇಟಿಯಾಗಿರುವ ವಿವರವನ್ನು ದಾಖಲಿಸಿದ್ದು,ಆದರೆ ದುರ್ದೈವದಿಂದ ಈ ಶಾಸನ ಭಿನ್ನವಾಗಿದ್ದು ಅವರ ಭೇಟಿಯ ಉದ್ದೇಶವಾಗಲಿ ಅದರ ಪರಿಣಾಮದ ವಿವರವಾಗಲಿ ದೊರೆತಿಲ್ಲ. ಕುರಹಟ್ಟಿ ಹೊಸೂರು ಗ್ರಾಮದ[14] ಕ್ರಿ.ಶ.16–17ನೇ ಶತಮಾನದ ಈ ಶಾಸನವು ಕಾಲದೊಂದಿಗೆ ಪ್ರಾರಂಭವಾಗಿದೆ. ಮಲ್ಲಹಳ್ಳೀಯ ಪಾಲೆನಾಯಕನ ಮಗನಾದ ಗೌರಪ್ಪನಾಯಕನು ಆಲಂಬಾಡಿ ಪಟ್ಟಣಸ್ವಾಮಿ ನಂಜಯ್ಯನಿಗೆ 4 ಅಂಕಣ ಮನೆಯನ್ನು ಮತ್ತು ಹಿಗ್ಗಿನ ಹೊಲವನ್ನು ಕೊಡುಗೆಯಾಗಿ ನೀಡಿದ ವಿವರವನ್ನು ಒಳಗೊಂಡಿದೆ.

ಮಹದೇಶ್ವರ ಬೆಟ್ಟ ದೇವಾಲಯದ ಸುಖನಾಸಿಯ ಬಾಗಿಲ ಮೇಲ್ಭಾಗದ[15] ಕ್ರಿ.ಶ. 7ನೇ ಶತಮಾನದ ಶಾಸನವು ಶಿಥಿಲಗೊಂಡಿದ್ದು, ಕಾಲದ ಉಲ್ಲೇಖದೊಂದಿಗೆ ಪ್ರಾರಂಭವಾಗಿದೆ. ಹೊನ್ನಣ್ಣ ಶೆಟ್ಟಿಯ ಮಗ

ಗುರುವ ಶೆಟ್ಟಿಯು ಕಲ್ಲುಗುಡಿಯ ಬಸದಿಯೆ ರಂಗಮಂಟಪವನ್ನು ಕಟ್ಟಿಸಿದನು ಎಂಬ ಉಲ್ಲೇಖವನ್ನು ದಾಖಲಿಸಿದೆ. ಇದೇ ತಾಲೂಕಿನ ಶ್ಯಾಗಂ ಗ್ರಾಮದ [16]ಕ್ರಿ.ಶ. 18ನೇ ಶತಮಾನ ಶಾಸನವು ತ್ರುಟಿತಗೊಂಡಿದ್ದು, ಹಾಲೆ ನಾಯಕರು ಸೆಗೆಯದ (ವ್ಯಕ್ತಿಗೆ) ಸುಂಕವನ್ನು ಪಡೆಯುವ ಅಧಿಕಾರವನ್ನು ಕೊಡುಗೆಯಾಗಿ ನೀಡಿರುವ ವಿವರವನ್ನು ದಾಖಲಿಸಲಾಗಿದೆ.

ಹನೂರು ತಾಲೂಕಿನ ಈ ಶಾಸನಗಳು ತಾಲೂಕಿನ ರಾಜಕೀಯ ಚರಿತ್ರೆ, ಇತಿಹಾಸ, ಸಾಂಸ್ಕೃತಿಕ ಮತ್ತು ಸಾಮಾಜಿಕ ಆಚರಣೆಗಳನ್ನು ದಾಖಲಿಸುತ್ತದೆ. ಈ ಶಾಸನಗಳಲ್ಲಿ ದಾನ ನೀಡಿದ ಶಾಸನಗಳೇ ಹೆಚ್ಚಾಗಿದ್ದು, ಈ ಎಲ್ಲಾ ವ್ಯವಸ್ಥಿತ ಆಚರಣೆಗಳನ್ನು ಅರ್ಥೈಸುವಲ್ಲಿ ಅತ್ಯಮೂಲ್ಯ ಪಾತ್ರವಹಿಸಿವೆ ಎಂದರೆ ಅತಿಶಯೋಕ್ತಿಯಾಗಲಾರದು.

## ಅಡಿಟಿಪ್ಪಣಿಗಳು

1. ಬಾ.ರಾ. ಗೋಪಾಲ್ : ಎಪಿಗ್ರಾಫಿಯ ಕರ್ನಾಟಿಕ ಸಂಪುಟ 4, ಶಾಸನಸಂಖ್ಯೆ 69, ಬಂಡಳ್ಳಿ, ಪುಟ 447.
2. ಪೂರ್ವೋಕ್ತ : ಸಂಪುಟ 4, ಶ್ಯಾಗಂ 65, ಪುಟ 445.
3. ಪೂರ್ವೋಕ್ತ : ಸಂಪುಟ 4, ಭದ್ರಳ್ಳಿ 73, ಪುಟ 450.
4. ಪೂರ್ವೋಕ್ತ : ಸಂಪುಟ 4, ಬೆಳತೂರು 86, ಪುಟ 456.
5. ಪೂರ್ವೋಕ್ತ : ಸಂಪುಟ 4, ಬೆಳತೂರು 87, ಪುಟ 456.
6. ಪೂರ್ವೋಕ್ತ : ಸಂಪುಟ 4, ಕೌದಳ್ಳಿ 72, ಪುಟ 446.
7. ಪೂರ್ವೋಕ್ತ : ಸಂಪುಟ 4, ಹನೂರು 82, ಪುಟ 454.
8. ಪೂರ್ವೋಕ್ತ : ಸಂಪುಟ 4, ಬಂಡಳ್ಳಿ 67, ಪುಟ 447.
9. ಪೂರ್ವೋಕ್ತ : ಸಂಪುಟ 4, ಬಂಡಳ್ಳಿ 70, ಪುಟ 446.
10 ಪೂರ್ವೋಕ್ತ : ಸಂಪುಟ 4, ಅಜ್ಜೀಪುರ 70, ಪುಟ 448.
11 ಪೂರ್ವೋಕ್ತ : ಸಂಪುಟ 4, ಅಜ್ಜೀಪುರ 78, ಪುಟ 452.
12. ಪೂರ್ವೋಕ್ತ : ಸಂಪುಟ 4, ಲೊಕ್ಕನಹಳ್ಳಿ 84, ಪುಟ 455.
13. ಪೂರ್ವೋಕ್ತ : ಸಂಪುಟ 4, ಲೊಕ್ಕನಹಳ್ಳಿ 83, ಪುಟ 455.
14. ಪೂರ್ವೋಕ್ತ : ಸಂಪುಟ 4, ಹನೂರು 83, ಪುಟ 455.
15. ಪೂರ್ವೋಕ್ತ : ಸಂಪುಟ 4, ಕುರಹಟ್ಟಿ ಹೊಸೂರು 76, ಪುಟ 452.
16. ಪೂರ್ವೋಕ್ತ : ಸಂಪುಟ 4, ಶ್ಯಾಗಂ 66, ಪುಟ 447.